# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಅಕ್ಟೋಬರ್ 27, 2020

ಸಂಪುಟ : 47 ಸಂಚಿಕೆ : 177 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com



ವಿಧಾನ ಪರಿಷತ್ ಆಗ್ನೇಯ ಪದವೀಧರ ಕ್ಷೇತ್ರ ಚುನಾವಣೆ - 2020 (ದಾವಣಗೆರೆ • ಚಿತ್ರದುರ್ಗ • ತುಮಕೂರು • ಚಿಕ್ಕಬಳ್ಳಾಪುರ • ಕೋಲಾರ)

2020 ರ ಅಕ್ಟೋಬರ್ 28 ರಂದು ನಡೆಯುವ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಡಾ. ಕೆ.ಎಂ. ಸುರೇಶ್ ಆದ ನಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ. ಚುನಾವಣಾ ಮತಪತ್ರದಲ್ಲಿ ನನ್ನ ಕ್ರಮ ಸಂಖ್ಯೆ: 14. ನನ್ನ ಹೆಸರು ಮತ್ತು ಭಾವಚಿತ್ರದ ಮುಂದೆ | ಎಂದು ಬರೆಯುವ ಮೂಲಕ ಪ್ರಥಮ ಪ್ರಾಶಸ್ತ್ಯ ಮತವನ್ನು ನೀಡಬೇಕಾಗಿ ವಿನಂತಿಸುತ್ತೇನೆ.

ಆಗ್ನೇಯ ಪದವೀಧರ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಲು ನನ್ನ ಧ್ಯೇಯಗಳು:
- ಸ್ಪರ್ಧಾ ಭವನಗಳ ನಿರ್ಮಾಣ, ಖಾಲಿ ಹುದ್ದೆಗಳ ಭರ್ತಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾರದರ್ಶಕತೆ
- ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ನಡೆಸಲು ಒತ್ತಾಯ. ಶೈಕ್ಷಣಿಕ ಚಾನೆಲ್ ಆರಂಭ
- ಎಂಎಲ್‌ಸಿ ಆಗಿಯೂ ಶಿಕ್ಷಕ ವೃತ್ತಿ ಮುಂದುವರಿಕೆ
- ವಿಧಾನಪರಿಷತ್ ಸದಸ್ಯನಾಗಿ 1 ರೂ. ಮಾತ್ರ ಸಂಬಳ ಪಡೆಯಲು ನಿರ್ಧಾರ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಭಾವಚಿತ್ರ | ಪ್ರಾಶಸ್ತ್ಯ ಮತ |
|---|---|---|---|
| 14 | ಡಾ. ಕೆ.ಎಂ. ಸುರೇಶ್ Dr. K.M. Suresh | | \| |

ವ್ಯಕ್ತಿ ಹಾಗೂ ಪಕ್ಷಕ್ಕಿಂತ ರಾಷ್ಟ್ರ ಮುಖ್ಯ

Spardha Vijetha Dr.K.M. Suresh
98454 19561, 91483 31139, 96068 00561

ಡಾ. ಕೆ.ಎಂ. ಸುರೇಶ್
M.Sc., M.Ed., Ph.D
ಪ್ರಧಾನ ಸಂಪಾದಕರು, ನಿಮ್ಮ ಸ್ಪರ್ಧಾ ವಿಜೇತ ಮಾಸ ಪತ್ರಿಕೆ
ಆಗ್ನೇಯ ಪದವೀಧರ ಕ್ಷೇತ್ರದ ಅಭ್ಯರ್ಥಿ

"ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಸೇವೆಯೊಂದೇ ಶಾಶ್ವತ" "ಬದಲಾವಣೆ ನಿಮ್ಮಿಂದಲೇ ಆರಂಭವಾಗಲಿ" "ಕೈಜೋಡಿಸಿ ಸಂಘಟಿತ ಪ್ರಯತ್ನದಿಂದ ಬದಲಾವಣೆ ಮಾಡೋಣ"


## ಆನ್‌ಲೈನ್ ಪ್ರಚಾರಕ್ಕೆ ಸುಪ್ರೀಂ ತಡೆ

ನವದೆಹಲಿ, ಅ. 26 - ನವೆಂಬರ್ 3ರಂದು ನಡೆಯಲಿರುವ ಮಧ್ಯಪ್ರದೇಶ ವಿಧಾನ ಸಭೆಯ ಉಪ ಚುನಾವಣೆಗೆ ರಾಜಕೀಯ ಪಕ್ಷಗಳು ಆನ್‌ಲೈನ್ ಮೂಲಕ ಮಾತ್ರ ಪ್ರಚಾರ ನಡೆಸಬೇಕು ಎಂದು ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ (2ನೇ ಪುಟಕ್ಕೆ)

## ಮೀಸಲಾತಿಗೆ ಸುಪ್ರೀಂ ನಕಾರ

ನವದೆಹಲಿ, ಅ. 26 – ವೈದ್ಯಕೀಯ ಕೋರ್ಸ್‌ಗಳಿಗಾಗಿ ಕೇಂದ್ರೀಯ ಕೋಟಾಗೆ ರಾಜ್ಯ ನೀಡಿದ ಸೀಟುಗಳಲ್ಲಿ ಶೇ.50 ರಷ್ಟಕ್ಕೆ ಮೀಸಲಾತಿ ಕಲ್ಪಿಸಬೇಕು ಎಂದು ತಮಿಳುನಾಡು ಹಾಗೂ ಎಐಎಡಿಎಂಕೆ ಸರ್ಕಾರ ದಾಖಲಿಸಿದ್ದ ಮಧ್ಯಂತರ ಮನವಿಯನ್ನು ಸುಪ್ರೀಂ ಕೋರ್ಟ್ (2ನೇ ಪುಟಕ್ಕೆ)

# ನಗರದಲ್ಲಿ ಸಂಭ್ರಮದ ದಶಮಿ



ವಿಜಯ ದಶಮಿ ಅಂಗವಾಗಿ ದಾವಣಗೆರೆಯ ಪಿಜೆ ಬಡಾವಣೆಯಲ್ಲಿರುವ ಶ್ರೀ ರಾಮ ಮಂದಿರದ ಬಳಿ ಸ್ಥಳೀಯರು ಬನ್ನಿ ಮರಕ್ಕೆ ಸೀರೆ ಉಡಿಸಿ ವಿಶೇಷ ಪೂಜೆ ಸಲ್ಲಿಸಿದರು. ಮತ್ತೊಂದು ಬದಿಯಲ್ಲಿ ಕುಟುಂಬದ ಸದಸ್ಯರು ಮರದಲ್ಲಿದ್ದ ಬನ್ನಿ ಪತ್ರಿಯನ್ನು ಹರಿಯುತ್ತಿರುವುದು ಹಾಗೂ ಪೂಜೆಗಾಗಿ ಕಂಕಣ ಕಟ್ಟುತ್ತಿರುವ ಚಿತ್ರಗಳಿವೆ.

ದಾವಣಗೆರೆ, ಅ. 26- ವಿಜಯ ದಶಮಿ ಹಬ್ಬವನ್ನು ನಗರದಲ್ಲಿ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ಸೋಮವಾರ ಸಂಜೆ ಬನ್ನಿ ಮುಡಿದ ಜನತೆ ಕುಟುಂಬ ಸಮೇತ ದೇವರ ದರ್ಶನಕ್ಕೆ ದಾಂಗುಡಿ ಇಟ್ಟಿದ್ದರಿಂದ ದೇವೀ ದೇವಾಲಯಗಳು ಸೇರಿದಂತೆ ಪ್ರಮುಖ ದೇವಾಲಯಗಳು ಭಕ್ತರಿಂದ ತುಂಬಿದ್ದವು.

ಕೊರೊನಾ ಹಿನ್ನೆಲೆಯಲ್ಲಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಸೂಚನಾ ಫಲಕಗಳು ಇದ್ದವಾದರೂ, ಭಕ್ತರು ಯಾವುದಕ್ಕೂ ಬೆಲೆ ನೀಡದೆ, ದೇವಿ ದರ್ಶನಕ್ಕೆ ಗುಂಪು (2ನೇ ಪುಟಕ್ಕೆ)

## ಸಮಾರಂಭಗಳ ನಿಷೇಧದಿಂದ ಕೊರೊನಾ ಇಳಿಕೆ

ಲಂಡನ್, ಅ. 26 - ಸಾರ್ವಜನಿಕ ಸಮಾರಂಭಗಳ ಮೇಲೆ ನಿಷೇಧ ಹೇರುವುದರಿಂದ ಕೊರೊನಾ ವೈರಸ್ ಹರಡುವ ಪ್ರಮಾಣವನ್ನು ಶೇ.24 ರಷ್ಟು ಇಳಿಸಬಹುದು ಎಂದು ದಿ ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟವಾದ ಅಧ್ಯಯನದಲ್ಲಿ ಹೇಳಲಾಗಿದೆ.

131 ದೇಶಗಳಲ್ಲಿ ತೆಗೆದುಕೊಳ್ಳಲಾದ ಶಾಲೆಗಳನ್ನು ಮುಚ್ಚುವುದು, ಸಾರ್ವಜನಿಕ ಸಮಾರಂಭಗಳ ನಿಷೇಧ ಸೇರಿದಂತೆ ಹಲವಾರು ಕ್ರಮಗಳ ಅಧ್ಯಯನ ನಡೆಸಿದ ನಂತರ ಈ ವರದಿ ರೂಪಿಸಲಾಗಿದೆ.

ಒಂದೇ ಕ್ರಮದಿಂದ ನಿಯಂತ್ರಣ (2ನೇ ಪುಟಕ್ಕೆ)


ಡಿಸ್ಕೌಂಟ್ ಧಮಾಕ
ನಮ್ಮೆಲ್ಲಾ ಗ್ರಾಹಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಪ್ರಯುಕ್ತ
ಭಾರೀ ರಿಯಾಯಿತಿ ದರದಲ್ಲಿ ಮಾರಾಟ
ದಿನಾಂಕ 24.10.2020 ರಿಂದ 28.10.2020 ರವರೆಗೆ ಮಾತ್ರ
ನಂದಿ ಇಂಟೀರಿಯರ್ಸ್ & ಡಿಸೈನರ್ಸ್
Exclusive Interior Designers For Your Fantasy
NANDI INTERIORS & DESIGNERS
# 596 JAGALUR ROAD, YELEBETHUR VILLAGE, DAVANGERE.
+91 96202 31800, /01/02/03/04, 08192 297288, web www.nandiinteriorsanddesigner.com



ಆಗ್ನೇಯ ಪದವಿಧರ ಕ್ಷೇತ್ರ ವಿಧಾನಪರಿಷತ್ ಚುನಾವಣೆ
28ನೇ ಅಕ್ಟೋಬರ್ – 2020

ಆತ್ಮೀಯ ಪದವೀಧರ ಬಂಧುಗಳೆಲ್ಲರಿಗೂ ಹಾರ್ದಿಕ ಶುಭಾಶಯಗಳು

ಚಿದಾನಂದ್ ಎಂ. ಗೌಡ (ಪ್ರೆಸಿಡೆನ್ಸಿ)
ಅಭ್ಯರ್ಥಿ, ಭಾರತೀಯ ಜನತಾ ಪಾರ್ಟಿ,
ಆಗ್ನೇಯ ಪದವೀಧರ ಕ್ಷೇತ್ರ

ಬಂಧುಗಳೇ,
ತಮ್ಮ ಪ್ರಥಮ ಪ್ರಾಶಸ್ತ್ಯದ ಮತನೀಡಿ ನನ್ನನ್ನು ವಿಜಯಶಾಲಿಯನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.

| ಕ್ರ. ಸಂ. Sl. No. | ಅಭ್ಯರ್ಥಿಯ ಹೆಸರು Name of the Candidate | ಭಾವಚಿತ್ರ Photo | ಪ್ರಾಶಸ್ತ್ಯ ಮತ Preferential Vote |
|---|---|---|---|
| 1 | ಚಿದಾನಂದ್ ಎಂ. ಗೌಡ (ಪ್ರೆಸಿಡೆನ್ಸಿ) Chidanand M. Gowda (Presidency) | | \| |



ಆಗ್ನೇಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ-2020

ಆಗ್ನೇಯ ಪದವೀಧರ ಮತದಾರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ 28 ನೇ ಅಕ್ಟೋಬರ್-2020

ಆತ್ಮೀಯ ಮತದಾರ ಬಂಧುಗಳೇ, ದಿನಾಂಕ 28.10.2020ರ ಬುಧವಾರ ನಡೆಯುವ ಆಗ್ನೇಯ ಪದವೀಧರರ ಚುನಾವಣೆಯ ಹಿನ್ನೆಲೆಯಲ್ಲಿ ಡಿ.ಟಿ. ಶ್ರೀನಿವಾಸ ಆದ ನಾನು ಸದರಿ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ತಮ್ಮ ಅಮೂಲ್ಯವಾದ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ, ನನ್ನನ್ನು ನಿಮ್ಮ ಸೇವೆ ಮಾಡಲು ಜಯಶೀಲರನ್ನಾಗಿ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ.

ಇಂತಿ ತಮ್ಮ ಸೇವಾಕಾಂಕ್ಷಿ,
ಡಿ.ಟಿ. ಶ್ರೀನಿವಾಸ
D.Ph., BE (Civil), M.Tech., M.A., M.B.A. (LL.B.)
ಮಾಜಿ ಕೆ.ಎ.ಎಸ್. ಅಧಿಕಾರಿಗಳು, ಕಾರ್ಯದರ್ಶಿಗಳು,
ಎಸ್.ಇ.ಎ. ವಿದ್ಯಾಸಂಸ್ಥೆಗಳು, ಅಧ್ಯಕ್ಷರು,
ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘ (ರಿ.)

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಭಾವಚಿತ್ರ | ಪ್ರಾಶಸ್ತ್ಯ |
|---|---|---|---|
| 12 | ಡಿ.ಟಿ. ಶ್ರೀನಿವಾಸ | | I |

# ಪಂಚಮಸಾಲಿಗರನ್ನು 2ಎಗೆ ಸೇರಿಸಬೇಕೆಂಬ ಕೂಗು ಇಂದು, ನಿನ್ನೆಯದಲ್ಲ: ವಚನಾನಂದ ಶ್ರೀ

ದಾವಣಗೆರೆ, ಅ. 26- ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಬಿಗೆ ಸೇರಿಸುವ ಒತ್ತಾಯಕ್ಕೆ ಮತ್ತೆ ಪುಷ್ಟಿ ಬಂದಿದೆ. ಪಂಚಮಸಾಲಿ ಸಮಾಜದ ಎರಡು ಪ್ರಮುಖ ಮಠಗಳ ಮಠಾಧೀಶರು ಮತ್ತೆ ದನಿ ಎತ್ತಿದ್ದಾರೆ.

ಪ್ರಸ್ತುತ ಪಂಚಮಸಾಲಿ ಸಮುದಾಯದವರು 3ಬಿ ಮೀಸಲು ಪಡೆಯುತ್ತಿದ್ದಾರೆ. ಇದರ ಕೋಟಾ ಪ್ರತಿಶತ 5 ಮಾತ್ರ. 2ಎ ಮೀಸಲು ಸಿಕ್ಕರೆ ಅದು ಪ್ರತಿಶತ 15ರಷ್ಟಾಗುತ್ತದೆ. ಇದರಿಂದ ಉದ್ಯೋಗ, ಶಿಕ್ಷಣದಲ್ಲಿ ಹೆಚ್ಚಿನ ಮೀಸಲು ದೊರೆತು ಸಮಾಜ ಮುಂದುವರೆಯಲು ಸಾಧ್ಯವಾಗುತ್ತದೆ ಎಂಬ ನಿಟ್ಟಿನಲ್ಲಿ ಕಳೆದ ಹಲವಾರು ವರ್ಷಗಳಿಂದ ಹೋರಾಟ ನಡೆಯುತ್ತಲೇ ಇದೆ.

ಇದೇ 28 ರಂದು ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಅವರು 2ಎ ಮೀಸಲಾತಿಗಾಗಿ ಬೆಳಗಾವಿಯ ವಿಕಾಸ ಸೌಧದ ಬಳಿ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ.

ಇತ್ತ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರೂ ಸಹ ಸಮಾಜವನ್ನು ಸಂಘಟಿಸಿ, ಮೀಸಲಾತಿಗಾಗಿ ಹೋರಾಟದ ರೂಪು ರೇಷೆಗಳನ್ನು ಸಿದ್ಧಪಡಿಸಲು ಸಮಾಜದ ಮುಖಂಡರು, ತಜ್ಞರೊಂದಿಗೆ ಸಮಾಲೋಚನೆಯಲ್ಲಿದ್ದಾರೆ.

ಈ ಮಧ್ಯೆ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀ ವಚನಾನಂದ ಸ್ವಾಮೀಜಿ, ಪಂಚಮಸಾಲಿ ಸಮಾಜವನ್ನು ಪ್ರವರ್ಗ 2ಎಗೆ ಸೇರಿಸಬೇಕು ಎನ್ನುವ ಕೂಗು ಇಂದು ನಿನ್ನೆಯದಲ್ಲ. ಕಳೆದ ಇಪ್ಪತ್ತೈದು ವರ್ಷಗಳ ಹಿಂದಿನದ್ದು ಎಂದಿದ್ದಾರೆ.

ಲಿಂಗಾಯತದಲ್ಲಿ ನೂರೊಂದು ಪಂಗಡಗಳಿವೆ. ಅದರಲ್ಲಿ ಪಂಚಮಸಾಲಿ ಅಗ್ರಗಣ್ಯ ಉಪ ಪಂಗಡ. ಇಂದು ಪಂಚಮಸಾಲಿಗಳು ಬಹು ಸಂಖ್ಯಾತರಿದ್ದಾರೆ ಎನ್ನುವ ಕಾರಣಕ್ಕೆ ಅವರ ಪರಿಸ್ಥಿತಿ ಚೆನ್ನಾಗಿರದಿದ್ದರೂ ಅವರಿಗೆ ಮೀಸಲು ಸೌಲಭ್ಯ ಸಿಗುತ್ತಿಲ್ಲ. ಇದು ಬಹುದೊಡ್ಡ ಅನ್ಯಾಯ ಎಂದು ವಚನಾನಂದ ಶ್ರೀಗಳು ಹೇಳಿದರು.



2ಎ ಮೀಸಲಿನಿಂದ ನಾವು ಬೇರೆ ಯಾರ ಹಕ್ಕನ್ನೂ ಕಸಿದುಕೊಳ್ಳುವುದಿಲ್ಲ. ಪಂಚಮಸಾಲಿಗಳಿಗೆ ಯಾವಾಗಲೂ ಕೊಟ್ಟು ಅಭ್ಯಾಸವೇ ಹೊರತು, ಪಡೆದು ಅಲ್ಲ. ಆದರೆ, ಸಿಗಬೇಕಾದ ಸೌಲಭ್ಯ ಸಿಕ್ಕಿಲ್ಲ ಎಂಬ ಕೊರಗಿದೆ.aಅದಕ್ಕಾಗಿ ಹೋರಾಡುತ್ತೇವೆ.

- ಶ್ರೀ ವಚನಾನಂದ ಸ್ವಾಮೀಜಿ,
ವೀರಶೈವ ಲಿಂಗಾಯತ ಪಂಚಮಸಾಲಿ ಪೀಠ, ಹರಿಹರ

1994ರಲ್ಲಿ ವೀರಪ್ಪ ಮೋಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ ರಾಜ್ಯದಲ್ಲಿ ಪ್ರವರ್ಗ 2ಎ ಗೆ ಹಾಗೂ ಕೇಂದ್ರದಲ್ಲಿ ಒಬಿಸಿಗೆ ಸೇರಿಸಬೇಕು ಎಂದು ಪಂಚಮಸಾಲಿ ಸಮುದಾಯದ ನಾಯಕರೆಲ್ಲ ಮನವಿ ಮಾಡಿದ್ದರು. ಅಂದಿನಿಂದ ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಈ ಕುರಿತ ಅಹವಾಲು ಸಲ್ಲಿಸುತ್ತಲೇ ಬರಲಾಗಿದೆ ಎಂದರು.

ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಜಾತಿ ಎಂಬ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂಬುದೇ ಇರಲಿಲ್ಲ. ಆಗ ಸಮುದಾಯದ ನಾಯಕರಾದ ಬಿ.ಎಂ. ಹನುಮನಾಳ ಅವರು ಮುಂಚೂಣಿಯಲ್ಲಿ ನಿಂತು ರಾಜ್ಯದಲ್ಲಿ ವಿವಿಧೆಡೆ ಸಮೀಕ್ಷೆ ನಡೆಸಿದರು. 85 ಲಕ್ಷಕ್ಕಿಂತ ಅಧಿಕ ಸಂಖ್ಯೆಯಲ್ಲಿ ಪಂಚಮಸಾಲಿಗಳು ಇದ್ದಾರೆಂದು ಸ್ಪಷ್ಟಪಡಿಸಿಕೊಂಡರು.

2009ರಲ್ಲಿ ಸಚಿವರಾಗಿದ್ದ ಸಮುದಾಯದ ಮುಖಂಡರೇ ಆದ ಮುರುಗೇಶ್ ನಿರಾಣಿ ಅವರ ಒತ್ತಾಸೆಯಿಂದ ಸಾಮಾನ್ಯ ವರ್ಗದಿಂದ 3ಬಿ ಕೆಟಗರಿಗೆ ಸೇರಿಸಲಾಯಿತು. ಈಗ 2ಎಗೆ ಸೇರಿಸಬೇಕು ಎಂದು ಆಗ್ರಹಿಸಲಾಗುತ್ತಿದೆ ಎಂದು ಹೇಳಿದರು.

ಪಂಚಮಸಾಲಿಗಳಲ್ಲಿ ರೈತರೇ ಹೆಚ್ಚು, ಈಗ ರೈತ ಸಮುದಾಯ ಸಂಕಷ್ಟದಲ್ಲಿದೆ. ಶಿಕ್ಷಣ, ಉದ್ಯೋಗ ಎರಡರಲ್ಲೂ ಮೀಸಲಾತಿ ಬಯಸುತ್ತಿದ್ದೇವೆ. ಮೀಸಲಾತಿ ವಿಷಯದಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆಯಬೇಕಿದೆ. ಅದಕ್ಕೆ ಪೂರ್ವಭಾವಿಯಾಗಿ ಸಮುದಾಯದ ರಾಜಕರಾಣಿಗಳು, ನಾಯಕರು ಒಂದೆಡೆ ಸೇರಿ ರೂಪುರೇಷೆ ಸಿದ್ಧಪಡಿಸಬೇಕಿದೆ ಎಂದರು.

ಪಂಚಮಸಾಲಿಗಳಿಗೆ 2ಎ ಮೀಸಲು ಸೌಲಭ್ಯ ಬೇಕಾದರೆ ಕಾನೂನುಬದ್ಧವಾಗಿ ಸರ್ಕಾರಕ್ಕೆ ಕುಲ ಶಾಸ್ತ್ರೀಯ ಅಧ್ಯಯನ ಕೈಗೊಂಡು ಅದರ ಪುಸ್ತಕ ರಚಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಇದನ್ನು ಮಾಡಲು ಮೈಸೂರು ವಿವಿಯಲ್ಲಿ ಒಂದು ವಿಭಾಗವಿದೆ. ಇದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸಮುದಾಯದ ಹಿರಿಯರು ಹಾಗೂ ತಜ್ಞರ ಜೊತೆ ಚರ್ಚಿಸಿ ಇದಕ್ಕೆ ಅಂತಿಮ ರೂಪ ನೀಡುತ್ತವೆ. ನಂತರ ಸರ್ಕಾರ ಮೀಸಲು ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳುತ್ತದೆ ಎಂದರು.

ಸಮಾಜದ ಹಿರಿಯರೆಲ್ಲಾ ಒಟ್ಟಾಗಿ ಸೇರಿಸಿ 2ಎ ಮೀಸಲು ಪಡೆಯಲೇಬೇಕೆಂಬ ಹೋರಾಟ ಅಣಿಗೊಳಿಸಲು ಸಿದ್ಧವಾಗಿದ್ದೇವೆ. ಸದ್ಯ ನಮ್ಮ ಹೋರಾಟ ಪ್ರಾಥಮಿಕ ಹಂತದಲ್ಲಿದ್ದು, ಹಂತ ಹಂತವಾಗಿ ಗುರಿ ಮುಟ್ಟುವರೆಗೂ ತೆಗೆದುಕೊಂಡು ಹೋಗಲಾಗುವುದು. ಮೀಸಲು ಪಡೆದೇ ತೀರುತ್ತೇವೆ ಎಂದರು.

ಕೂಡಲ ಸಂಗಮದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಪಂಚಮಸಾಲಿಗಳಿಗೆ 2ಎ ಮೀಸಲು ನೀಡಬೇಕೆಂದು ಹೋರಾಟ ರೂಪಿಸುತ್ತಿದ್ದಾರೆ. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದರೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಿಲ್ಲ. ಹೋರಾಟಕ್ಕೆ ಬೆಂಬಲ ನೀಡುವಂತೆ ಸಮುದಾಯದವರಿಗೆ ಸೂಚಿಸಿದ್ದೇವೆ ಎಂದು ವಚನಾನಂದ ಶ್ರೀಗಳು ಹೇಳಿದರು.

## ಹರಪನಹಳ್ಳಿಯಲ್ಲಿ ನಾಳೆಯಿಂದ ಹಾಲಸ್ವಾಮಿ ಜಾತ್ರೋತ್ಸವ



ಹರಪನಹಳ್ಳಿ, ಅ.26- ಹಿಂದೂ-ಮುಸ್ಲಿಂ ಭಾವೈಕ್ಯತೆ ಸಾರುವ ಹಾಲಸ್ವಾಮಿ ಜಾತ್ರಾ ಮಹೋತ್ಸವ ಪಟ್ಟಣದ ವಾಲ್ಮೀಕಿ ನಗರದಲ್ಲಿ ನಾಡಿದ್ದು ದಿನಾಂಕ 28 ರಿಂದ ಮೂರು ದಿನಗಳ ಕಾಲ ಸರಳವಾಗಿ ಸಾಂಪ್ರದಾಯಿಕವಾಗಿ ಜರುಗಲಿದೆ ಎಂದು ಶ್ರೀ ಸಣ್ಣ ಹಾಲಸ್ವಾಮಿಜಿ ತಿಳಿಸಿದ್ದಾರೆ.

ಪಟ್ಟಣದ ವಾಲ್ಮೀಕಿ ನಗರದಲ್ಲಿರುವ ಶ್ರೀ ಹಾಲಸ್ವಾಮಿ ಮಠದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 28 ರ ಬುಧವಾರ ರಾತ್ರಿ 11 ಗಂಟೆಗೆ ಮುಳ್ಳುಗದ್ದುಗೆ ಉತ್ಸವ, ದಿನಾಂಕ 29ರ ಗುರುವಾರ ರಥೋತ್ಸವ, 30 ರ ಶುಕ್ರವಾರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಹಾಲಸ್ವಾಮಿ ಜಾತ್ರಾ ಮಹೋತ್ಸವ ಸರಳ ಹಾಗೂ ಸಾಂಪ್ರದಾಯಿಕವಾಗಿ ಜರುಗಲಿದೆ ಎಂದು ಹೇಳಿದರು. ಹೊರಗಿನ ಭಕ್ತಾದಿಗಳಿಗೆ ಪ್ರವೇಶ ನಿಷೇಧವಿದ್ದು, ಜಾತ್ರೆಯಲ್ಲಿ ಸಾಮಾಜಿಕ ಅಂತರ ಹಾಗೂ ಮಾಸ್ಕ್ ಕಡ್ಡಾಯವಾಗಿ ಧರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜದ ತಾಲ್ಲೂಕು ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ, ಸಮಾಜದ ಮುಖಂಡರಾದ ಹಾಲಸಿದ್ದಪ್ಪ, ಎನ್. ದೊಡ್ಡಹಾಲಪ್ಪ, ಕೆ. ಅಂಜಿನಪ್ಪ, ಆರ್. ದುರುಗಪ್ಪ, ಶಿರಹಟ್ಟಿ ಬಸವರಾಜ, ಎಂ.ಸುರೇಶ್, ಕವಸರ ಮಹಾಬಲೇಶ್, ಎಂ. ಹನುಮಂತ, ಎಂ. ಅಂಜಿನಪ್ಪ, ಕೆ. ಹಾಲೇಶಪ್ಪ, ಕೆ.ಹನುಮಂತಪ್ಪ, ಕೆ.ಸಣ್ಣಲಕ್ಕಪ್ಪ, ಎಸ್.ಸುರೇಶ್, ಕೆ.ದುರುಗದಯ್ಯ ಸೇರಿದಂತೆ ಇತರರು ಇದ್ದರು.

# ದೇಶದ ಹಿತಕ್ಕೆ ಒಂದು ಗಂಟೆ ಮೀಸಲಿಡುವ ಸಂಕಲ್ಪ ಮಾಡೋಣ

ದಾವಣಗೆರೆ, ಅ.26- ಸನಾತನ ಧರ್ಮವಾದ ಭಾರತೀಯ ಹಿಂದೂ ಸಂಸ್ಕೃತಿ, ಸಂಸ್ಕಾರ, ಅಂತ ಸತ್ವವನ್ನು ನಮ್ಮ ಮುಂದಿನ ಪೀಳಿಗೆಗೆ ಉಳಿಸುವ ಸಂಕಲ್ಪವನ್ನು ಪ್ರತಿಯೊಬ್ಬರೂ ಮಾಡೋಣ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶಿಸಿದರು.

ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಉತ್ಸವ ಸಮಿತಿ ವತಿಯಿಂದ 36ನೇ ನೇ ಸಾರ್ವಜನಿಕ ವಿಜಯದಶಮಿ ಅಂಗವಾಗಿ ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಅಂಬು ಛೇದನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶರನ್ನವರಾತ್ರಿ ದಸರಾ ಮಹೋತ್ಸವದಲ್ಲಿ ನವದುರ್ಗಿಯರನ್ನು ಪೂಜಿಸಿ, ಆರಾಧಿಸುವ ಮೂಲಕ ನಮ್ಮಲ್ಲಿರುವ ಷಡ್ವರ್ಗಗಳ ನಾಶಕ್ಕೆ ಹಾಗೂ ರಾಗ, ದ್ವೇಷ, ಅಸೂಯೆಗಳನ್ನು ಸಂಹರಿಸಿಕೊಂಡು ದೇಶ ಭಕ್ತಿ ಮತ್ತು ಪ್ರೇಮವನ್ನು ಮೆರೆಯಲು ಮುಂದಾಗೋಣ. ಬನ್ನಿ ಮುಡಿದು ನಮ್ಮ ನಡೆ-ನುಡಿ, ಆಚಾರ-ವಿಚಾರಗಳ ಸಂಪನ್ನಗೊಳಿಸಿಕೊಂಡು ಬದುಕು ಬಂಗಾರವಾಗಿಸಿಕೊಳ್ಳೋಣ.

ದೇಶದ ಹಿತಕ್ಕಾಗಿ, ಹಿಂದೂ ಸಂಸ್ಕೃತಿ ಉಳಿಸುವಲ್ಲಿ ಪ್ರತಿಯೊಬ್ಬರೂ ಪ್ರತಿ ದಿನ ಒಂದು ಗಂಟೆಯಾದರೂ ಮೀಸಲಿಡುವ ಸಂಕಲ್ಪ ಮಾಡಬೇಕಿದೆ ಎಂದು ತಿಳಿಸಿದರು.

ಪ್ರಸ್ತುತ ಅನ್ನದಾತನ ಬದುಕೇ ಸಂಕಷ್ಟದಲ್ಲಿದ್ದು, ಅನ್ನವಿಲ್ಲದೆ ಪರಿತಪಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಅನ್ನದಾತ ಇಂತಹ ಸಂಕಷ್ಟದ ಬದುಕನ್ನು ಸಾಗಿಸುತ್ತಿದ್ದಾನೆ. ದೇಶದ ಸೈನಿಕರು ಮನೆ-ಮಕ್ಕಳು, ತಮ್ಮ ಪರಿವಾರವನ್ನೇ ಬಿಟ್ಟು ಚಳಿ, ಮಳೆ ಎನ್ನದೇ ತ್ಯಾಗ, ಬಲಿದಾನಗಳ ಮೂಲಕ ದೇಶದ ಗಡಿ ಕಾಯುತ್ತಾ ಜನರನ್ನು ರಕ್ಷಿಸುತ್ತಿದ್ದಾರೆ. ಇಂತಹ ಅನ್ನದಾತನ ಬದುಕು ಹಸನಾಗಲಿ, ದೇಶದ ಸೈನಿಕರಿಗೆ ದುರ್ಗಾ ಮಾತೆ ಶಕ್ತಿ ತುಂಬಲಿ.


ಜೊತೆಗೆ ದೇಶದಲ್ಲಿ ಕೊರೊನಾ ಸೇರಿದಂತೆ ಇನ್ನಿತರೆ ಕಾಯಿಲೆಗಳು ದೂರವಾಗಿ ಜನರು ಆರೋಗ್ಯವಂತರನ್ನಾಗಿಡುವಂತೆ ಈ ವಿಜಯದಶಮಿಯಂದು ನಾವುಗಳು ಪ್ರಾರ್ಥಿಸೋಣ ಎಂದು ಕರೆ ನೀಡಿದರು.

ಆರ್‌ಎಸ್‌ಎಸ್‌ನ ಶಿವಮೊಗ್ಗ ವಿಭಾಗದ ಪ್ರಚಾರಕ ನವೀನ್ ಸುಬ್ರಹ್ಮಣ್ಯ ಮಾತನಾಡಿ, ಈ ಬಾರಿಯ ವಿಜಯದಶಮಿ ಪ್ರತಿಯೊಬ್ಬ ಹಿಂದೂವಿಗೆ ಸಂಭ್ರಮ ನೀಡುವ ಹಬ್ಬವಾಗಿದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡುವ ಮೂಲಕ ಈ ಬಾರಿಯ ವಿಜಯದಶಮಿ ಭಾರತೀಯರ ಸ್ವಾಭಿಮಾನವನ್ನು ಮತ್ತಷ್ಟು ಹುಟ್ಟುಹಾಕಿದೆ. ಮನೆ ಮನೆಯಲ್ಲಿ ವಿಜಯದಶಮಿಯ ಸಂಭ್ರಮ ಇದೆ ಎಂದರು.

ಸಾರ್ವಜನಿಕ ವಿಜಯದಶಮಿ ಉತ್ಸವ ಸಮಿತಿ ಸಂಚಾಲಕ ಸಿ.ಎಸ್. ರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ ಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ. ವೀರೇಶ್, ಸತೀಶ್ ಪೂಜಾರಿ ಮುಂತಾದ ಗಣ್ಯರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಅಂಬು ಛೇದನ ಮಾಡಿದರು.



ಬನ್ನಿ ವಿನಿಮಯ ಮಾಡಿಕೊಳ್ಳುತ್ತಿರುವ ಗಣ್ಯರು.

## ವಿ.ಹೆಚ್.ಪಿ. ಯ ದಸರಾ ಮಹೋತ್ಸವದಲ್ಲಿ ಆವರಗೊಳ್ಳದ ಶ್ರೀಗಳು

**ಅಂಬು ಛೇದಿಸಿದ ಡಿಸಿ:** ಮಹಾಂತೇಶ್ ಬೀಳಗಿ ಅವರು ದಾವಣಗೆರೆಗೆ ಜಿಲ್ಲಾಧಿಕಾರಿಯಾಗಿ ಬಂದ ನಂತರ ಇದು ಎರಡನೇ ಬಾರಿ ವಿಜಯದಶಮಿಯಲ್ಲಿ ಅಂಬು ಛೇದನ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಕೊರೊನಾದಂತಹ ಸಂಕಷ್ಟದ ಕಾಲದಲ್ಲಿ ಎಲ್ಲರಿಗೂ ಆರೋಗ್ಯ ಭಾಗ್ಯ ದಯಪಾಲಿಸಲಿ. ಇದೊಂದು ರಾಜಕೀಯೇತರ, ಧಾರ್ಮಿಕ ಕಾರ್ಯಕ್ರಮವಾಗಿದೆ ಎಂದರು.

**ಬನ್ನಿ ವಿನಿಮಯ:** ಅಂಬು ಛೇದನ ನಂತರ ಅಲ್ಲಿದ್ದ ಗಣ್ಯರು ಹಾಗೂ ಸಾರ್ವಜನಿಕರು ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡು ಬದುಕು ಬಂಗಾರವಾಗಲಿ ಎಂದು ಶುಭ ಕೋರಿದರು.

## ಹೊನ್ನಾಳಿ, ಹರಿಹರ ತಾಲ್ಲೂಕುಗಳಲ್ಲಿ ಇಂದು ಲೋಕಾಯುಕ್ತರ ಪ್ರವಾಸ

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಹೊನ್ನಾಳಿ ಹಾಗೂ ಹರಿಹರ ತಾಲ್ಲೂಕುಗಳಲ್ಲಿ ಇಂದು - ನಾಳೆ ಪ್ರವಾಸ ಕೈಗೊಳ್ಳಲಿದ್ದು, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರು ಸ್ವೀಕರಿಸಲಿದ್ದಾರೆ.

ಲೋಕಾಯುಕ್ತ ಪೊಲೀಸ್ ನಿರೀಕ್ಷಕ ಟಿ.ಎಸ್.ಮುರುಗೇಶ್ ಅವರು ಇಂದು ಬೆಳಿಗ್ಗೆ 10.30 ರಿಂದ ಸಂಜೆ 1.30 ರವರೆಗೆ ಹೊನ್ನಾಳಿ ಪ್ರವಾಸಿ ಮಂದಿರದಲ್ಲಿ ಹಾಗೂ ಅದೇ ದಿನ ಮಧ್ಯಾಹ್ನ 2.30 ರಿಂದ ಸಂಜೆ 5.30 ರವರೆಗೆ ನ್ಯಾಮತಿ ತಾಲ್ಲೂಕಿನ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಪೊಲೀಸ್ ನಿರೀಕ್ಷಕರಾದ ಆರ್.ಎಲ್. ಲಕ್ಷ್ಮೀಪತಿ ಅವರು ನಾಳೆ ದಿನಾಂಕ 28 ರ ಬುಧವಾರ ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ ಹರಿಹರ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು ಎಂದು ಕರ್ನಾಟಕ ಲೋಕಾಯುಕ್ತ (ಪ್ರಭಾರ) ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

## ಕಲ್ಲಿದ್ದಲು ಹಗರಣ : ಮಾಜಿ ಕೇಂದ್ರ ಸಚಿವಗೆ ಜೈಲು

ನವದೆಹಲಿ, ಅ. 26 – ಕಲ್ಲಿದ್ದಲು ಹಗರಣದಲ್ಲಿ ಸಿಲುಕಿದ್ದ ಮಾಜಿ ಕೇಂದ್ರ ಸಚಿವ ದಿಲೀಪ್ ರೇ ದೋಷಿ ಎಂದಿರುವ ದೆಹಲಿ ನ್ಯಾಯಾಲಯ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. 1999ರಲ್ಲಿ ಜಾರ್ಖಂಡ್ ಕಲ್ಲಿದ್ದಲು ಗಣಿ ವಿತರಿಸುವಾಗ ಅವ್ಯವಹಾರ ನಡೆಸಿದ ಆರೋಪ ದಿಲೀಪ್ ರೇ ಮೇಲಿತ್ತು.

ಅವ್ಯವಹಾರ ನಡೆದಾಗ ದಿಲೀಪ್ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕಲ್ಲಿದ್ದಲು ಖಾತೆ ಅಧೀನ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಕಲ್ಲಿದ್ದಲು ಇಲಾಖೆಯ ಅಧಿಕಾರಿಗಳಾಗಿದ್ದ ಪ್ರದೀಪ್ ಕುಮಾರ್ ಬ್ಯಾನರ್ಜಿ ಹಾಗೂ ನಿತ್ಯಾನಂದ ಗೌತಮ್ ಹಾಗೂ ಕ್ಯಾಸ್ಟ್ರನ್ ಟೆಕ್ನಾಲಜೀಸ್ ಕಂಪನಿಯ ನಿರ್ದೇಶಕ ಮಹೇಂದ್ರ ಕುಮಾರ್ ಅಗರ್‌ವಾಲ್ ಅವರಿಗೂ ನ್ಯಾಯಾಲಯ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆಯಲ್ಲದೇ, ತಲಾ 10 ಲಕ್ಷ ರೂ.ಗಳ ದಂಡ ಹೇರಿದೆ.

ಕ್ಯಾಸ್ಟ್ರನ್ ಟೆಕ್ನಾಲಜೀಸ್ ಕಂಪನಿಗೆ ಪ್ರತ್ಯೇಕವಾಗಿ 60 ಲಕ್ಷ ರೂ. ಹಾಗೂ ಕ್ಯಾಸ್ಟ್ರನ್ ಮೈನಿಂಗ್ ಕಂಪನಿಗೆ 10 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ. ಆದರೆ, ದೋಷಿಗಳು ಹೈಕೋರ್ಟ್ ಮೊರೆ ಹೋಗುವ ಮೂಲಕ ಜಾಮೀನು ಪಡೆಯಲು ನ್ಯಾಯಾಲಯ ಅವಕಾಶ ನೀಡಿದೆ.

ಗಣಿಗಾರಿಕೆಯಿಂದ ಪಡೆಯಲಾದ ಕಲ್ಲಿದ್ದಲನ್ನು ಸರ್ಕಾರದ ವಶಕ್ಕೆ ನೀಡಲಾಗಿದೆ. ಇದರಿಂದಾಗಿ ಬೊಕ್ಕಸಕ್ಕೆ ಯಾವುದೇ ನಷ್ಟವಾಗಿಲ್ಲ ಎಂಬ ದೋಷಿಗಳ ವಾದವನ್ನು ನ್ಯಾಯಾಲಯ ತಳ್ಳಿ ಹಾಕಿದೆ.

ಸಮರ್ಪಕ ಕಲ್ಲಿದ್ದಲು ಪೂರೈಕೆಗೆ ತೊಡಕಾಗಿದ್ದರಿಂದ ದೇಶದ ಮೂಲಭೂತ ಸೌಲಭ್ಯ ಹಾಗೂ ಕೈಗಾರಿಕಾ ಬೆಳವಣಿಗೆ ಮೇಲೆ ಪರಿಣಾಮವಾಗಿದೆ. ಸೂಕ್ತ ಕಾನೂನು ಪ್ರಕ್ರಿಯೆ ಮೂಲಕ ಕಲ್ಲಿದ್ದಲು ವಿತರಣೆ ಮಾಡಿದ್ದರೆ ದೇಶದ ಬೆಳವಣಿಗೆಗೆ ಅನುಕೂಲವಾಗುತ್ತಿತ್ತು ಎಂದು ನ್ಯಾಯಾಲಯ ತಿಳಿಸಿದೆ.

ನಿಯಮ ಮೀರಿ ಅನರ್ಹರಿಗೆ ಕಲ್ಲಿದ್ದಲು ಗಣಿ ನೀಡಿದ್ದರಿಂದ ಯೋಜನೆಗಳಿಗೆ ಹಿನ್ನಡೆಯಾಗಿದೆ. ಸಮಾಜದ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಭ್ರಷ್ಟಾಚಾರ ಎಸಗಿದ್ದಾರೆ. ಇಂಥವರು ಭ್ರಷ್ಟಾಚಾರ ಎಸಗುವುದು ಸಾಮಾನ್ಯ ಅಪರಾಧಕ್ಕಿಂತ ಅಪಾಯಕಾರಿ. ಇಂಥವರಿಂದ ಆಗುವ ಹಣಕಾಸು ನಷ್ಟ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದು ಸಾರ್ವಜನಿಕ ನೈತಿಕತೆಯ ಮೇಲೂ ಪರಿಣಾಮವಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

## ಕೆಟಿಜೆ ನಗರದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಇಂದು

ದಾವಣಗೆರೆ ಕೆಟಿಜೆ ನಗರ 2ನೇ, 3ನೇ ಮುಖ್ಯರಸ್ತೆ, 17ನೇ ಕ್ರಾಸ್‌ನಲ್ಲಿರುವ ಶ್ರೀ ರಾಜರಾಜೇಶ್ವರಿ ಬನ್ನಿಮಹಾಂಕಾಳಿ ದೇವಸ್ಥಾನದಲ್ಲಿ ಇಂದು ಮಹಾಪೂಜೆ ಹಾಗೂ ಶ್ರೀದೇವಿಯ ರಥೋತ್ಸವದ ನಂತರ ಬೆಳಿಗ್ಗೆ 11 ಕ್ಕೆ ಮಹಾಮಂಗಳಾರತಿ, ಪ್ರಸಾದ ವಿತರಣೆ ಏರ್ಪಡಿಸಲಾಗಿದೆ.

## ಅಮೆರಿಕ : ನ.3ರ ಅಧ್ಯಕ್ಷೀಯ ಚುನಾವಣೆ: 58.7 ಲಕ್ಷ ಮತದಾನ

**ಫಲಿತಾಂಶ ವಿಳಂಬ ಸಾಧ್ಯತೆ**

ನ್ಯೂಯಾರ್ಕ್, ಅ. 26 – ಅಮೆರಿಕದಲ್ಲಿ 2020ರ ಅಧ್ಯ ಕ್ಷೀಯ ಚುನಾವಣೆಗೆ ಈಗಾಗಲೇ 58.7 ದಶಲಕ್ಷ ಜನರು ಮತ ಚಲಾಯಿಸಿದ್ದಾರೆ. ಇದು 2016ರ ಚುನಾವಣೆಗಿಂತಲೂ ಹೆಚ್ಚಾಗಿದೆ. ಆದರೆ, ಅಂಚೆ ಮೂಲಕ ಬಂದ ಮತಗಳ ಪ್ರಮಾಣ ಅಭೂತಪೂರ್ವ ಸಂಖ್ಯೆಯಲ್ಲಿರುವ ಕಾರಣದಿಂದಾಗಿ ಫಲಿತಾಂಶ ಚುನಾವಣೆ ನಡೆಯುವ ನವೆಂಬರ್ 3ಕ್ಕಿಂತ ವಿಳಂಬ ವಾಗಬಹುದಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಚುನಾವಣಾ ಅಧಿಕಾರಿಗಳ ಸಮೀಕ್ಷೆಯ ಪ್ರಕಾರ 58.7 ದಶಲಕ್ಷ ಅಮೆರಿಕನ್ನರು ಇದುವರೆಗೂ ಮತದಾನ ಮಾಡಿದ್ದಾರೆ. ಮತದಾನಕ್ಕೆ ನವೆಂಬರ್ 3ರವರೆಗೆ ಸಮಯ ಇದೆ. 2016ರಲ್ಲಿ ಸುಮಾರು 58.3 ದಶಲಕ್ಷ ಜನರು ಚುನಾವಣೆಗೆ ಮುಂಚೆ ಮತದಾನ ಮಾಡಿದ್ದರು. 2016ರಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ.42ರಷ್ಟನ್ನು ಅವಧಿಗೆ ಮುಂಚೆ ಚಲಾವಣೆ ಮಾಡಲಾ ಗಿತ್ತು.

ಈ ಬಾರಿ ಮತದಾನಕ್ಕೆ ಒಂಭತ್ತು ದಿನಗಳಿರುವಂತೆಯೇ 2016ರ ಮತದಾನ ಪ್ರಮಾಣ ವನ್ನು ದಾಟಲಾಗಿದೆ ಎಂದು ವರದಿ ತಿಳಿಸಿದೆ.


ಕೊರೊನಾ ವೈರಸ್ ನಡುವೆ ಚುನಾವಣಾ ಪೂರ್ವ ಮತದಾನ ಹೆಚ್ಚಾಗುತ್ತಿದೆ. ನವೆಂಬರ್‌ಗೆ ಮೊದಲು ಇಲ್ಲವೇ ಅಂಚೆ ಮೂಲಕ ಮತದಾನ ಮಾಡುವವರ ಪ್ರಮಾಣ ರಾಜ್ಯಗಳಲ್ಲಿ ದಾಖಲೆಗಳನ್ನು ಸೃಷ್ಟಿಸುತ್ತಿದೆ ಎಂದು ವರದಿ ಹೇಳಿದೆ. ಅಮೆರಿಕದಲ್ಲಿ 240 ದಶಲಕ್ಷ ಅರ್ಹ ಮತದಾರರಿದ್ದಾರೆ. ಆದರೆ, ಅಭೂತಪೂರ್ವ ಮತದಾನವಾದರೂ ಚುನಾವಣಾ ದಿನವಾದ ನವೆಂಬರ್ 3ರ ರಾತ್ರಿ ಫಲಿತಾಂಶ ಹೊರ ಬೀಳುವುದಿಲ್ಲ ಎಂದು ಸಿ.ಎನ್.ಎನ್. ವರದಿ ತಿಳಿಸಿದೆ.

ಹಲವೆಡೆ ಚುನಾವಣೆ ಪೂರ್ಣಗೊಳ್ಳು ವವರೆಗೂ ಅಂಚೆ ಮತ ಎಣಿಸುವುದಿಲ್ಲ. ಇದರಿಂದಾಗಿ ಚುನಾವಣೆಯ ಮರು ದಿನ ಬೆಳಿಗ್ಗೆ ಇಲ್ಲವೇ ಮಧ್ಯಾಹ್ನದ ನಂತರವೇ ಫಲಿತಾಂಶ ಹೊರ ಬೀಳಬಹುದು ಎಂದು ವರದಿ ತಿಳಿಸಿದೆ.

# ಪದವೀಧರ ಚುನಾವಣೆ : ಗೆಲುವಿಗಾಗಿ ಅಭ್ಯರ್ಥಿಗಳ ಹೋರಾಟ







ಆಗ್ನೇಯ ಪದವೀಧರ ಕ್ಷೇತ್ರದಿಂದ ನಡೆಯುವ ವಿಧಾನ ಪರಿಷತ್ತಿನ ಚುನಾವಣೆಗೆ ಕೇವಲ ಒಂದು ದಿನ ಬಾಕಿ ಉಳಿದಿದೆ. ಹಾಗೆ ನೋಡಿದರೆ ಅಭ್ಯರ್ಥಿಗಳಿಗೆ ಪದವೀಧರ ಮತದಾರರನ್ನು ಮುಖಾಮುಖಿ ತಲುಪಲು ಸಮಯದ ಅಭಾವ ಕಾಡಿದೆ. ಸುಮಾರು ಲಕ್ಷ ಚಿಲ್ಲರೆ ಮತದಾರರನ್ನು ಹೊಂದಿರುವ ಈ ಕ್ಷೇತ್ರ ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳನ್ನೊಳಗೊಂಡಿದೆ.

ಆಗ್ನೇಯ ಪದವೀಧರ ಕ್ಷೇತ್ರವಾದಂದಿನಿಂದಲೂ ಹೆಚ್ಚೂ ಕಡಿಮೆ ದಾವಣಗೆರೆ-ಚಿತ್ರದುರ್ಗ ಜಿಲ್ಲೆಯ ಕಡೆಯವರೇ ಹೆಚ್ಚಾಗಿ ಆಯ್ಕೆಯಾಗುತ್ತಾ ಬಂದಿದ್ದರು. ತುಮಕೂರಿನ ಎಸ್. ಮಲ್ಲಿಕಾರ್ಜುನಯ್ಯ ಸಹಾ ಗೆದ್ದಿದ್ದರು. ಬಹುತೇಕ ಲಿಂಗಾಯಿತರೇ ಚುನಾಯಿತರಾಗುತ್ತಾ ಬಂದ ಕ್ಷೇತ್ರ ಇದು. ಆದರೆ, ದಶಕದಿಂದ ಈಚೆಗೆ ವೈ. ನಾರಾಯಣ ಸ್ವಾಮಿಯವರು ಕಣಕ್ಕಿಳಿದ ನಂತರ ಲಿಂಗಾಯಿತ ಅಭ್ಯರ್ಥಿಗಳ ಗೆಲುವು ಕ್ಷೀಣಿಸುತ್ತಾ ಬಂತು. ಹೆಚ್.ಎಸ್.ಶಿವಶಂಕರ್, ಡಾ|| ಶಿವಯೋಗಿಸ್ವಾಮಿ ಅವರಿಗೆ ಹಿನ್ನಡೆ ಆಗಿ ಸೋಲು ಕಂಡಿದ್ದೂ ಉಂಟು. ಕೋಲಾರದ ಚೌಡರೆಡ್ಡಿ ತೂಪಲ್ಲಿ ಹಿಂದಿನ ಸಾರಿ ಗೆದ್ದಿದ್ದರು. ಶಿವಯೋಗಿಸ್ವಾಮಿ ಸೋತರು.

ಪ್ರಸ್ತುತ ಈ ಚುನಾವಣೆ ತೀವ್ರ ಕುತೂಹಲ ಕೆರಳಿಸಿದೆ. ಹದಿನೈದು ಜನ ಸ್ಪರ್ಧಿಗಳಿದ್ದರೂ ಮೇಲ್ನೋಟಕ್ಕೆ ಚತುಷ್ಕೋನ ಸ್ಪರ್ಧೆ ಆಗಿ ಕಂಡರೂ ಒಳನೋಟದಲ್ಲಿ ಪಂಚಕೋನ ಸ್ಪರ್ಧೆಯಾಗಿ ಮಾರ್ಪಡುತ್ತಿದೆ.

ಆಡಳಿತ ಪಕ್ಷ ಬಿಜೆಪಿ ಆರಂಭದಲ್ಲಿ ತನಗೆ ಈ ಕ್ಷೇತ್ರ ಸುಲಭದ ತುತ್ತು ಅಂದುಕೊಂಡಿತ್ತು. ಅದೇ ರೀತಿ ಹಾಲಿ ಸದಸ್ಯ ಜೆಡಿಎಸ್‌ನ ಚೌಡರೆಡ್ಡಿ ಅವರು ತನ್ನದೇ ಗೆಲುವು ಅಂದುಕೊಂಡಿದ್ದರು. ಕಾಂಗ್ರೆಸ್ ಇಲ್ಲಿ ಸತತ ಸೋಲುತ್ತಾ ಬಂದಿದೆ. ಆದರೆ, ಈ ಸಾರಿ ಜೆಡಿ ಎಸ್‌ನಿಂದ ವಲಸೆ ಬಂದ ರಮೇಶ್ ಬಾಬು ಅವರನ್ನು ಕಣಕ್ಕಿಳಿಸಿ ಭರವಸೆಯಿಂದ ಓಡಾಡುತ್ತಿದೆ.

ಪಕ್ಷ ರಾಜಕಾರಣದ ರೀತಿ ನೋಡಿದರೆ, ಇದು ತ್ರಿಕೋನ ಸ್ಪರ್ಧೆ ಆಗಬೇಕು. ಆದರೆ, ಬಿಜೆಪಿ ತೀವ್ರ ಬಂಡಾಯದ ಪೈಪೋಟಿ ಎದುರಿಸುತ್ತಿದೆ, ಅದು ಸತ್ಯ ಕೂಡಾ..

ಲಿಂಗಾಯಿತ ವಲಯದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಏಳು ಜನರು ಒಟ್ಟಾಗಿ ಸೇರಿ 'ನಮ್ಮಲ್ಲಿ ಯಾರಾದರೊಬ್ಬರಿಗೆ ಟಿಕೆಟ್ ಕೊಡಿ. ಗೆಲ್ಲಿಸುತ್ತೇವೆ' ಎಂದು ಬಿಜೆಪಿ ಹೈಕಮಾಂಡ್‌ಗೆ ಮನವಿ ಮಾಡಿದರೂ, ಟಿಕೆಟ್ ಸಿಕ್ಕಿದ್ದು, ಜೆಡಿಎಸ್‌ನಿಂದ ವಲಸೆ ಬಂದ ಚಿದಾನಂದಗೌಡ ಅವರಿಗೆ... ಇದರಲ್ಲಿ ವೈ. ನಾರಾಯಣ ಸ್ವಾಮಿ ಆಟ ಆಡಿ ದಾವಣಗೆರೆ-ಚಿತ್ರದುರ್ಗ ಭಾಗದ ಆಕಾಂಕ್ಷಿಗಳಿಗೆ ಟಿಕೆಟ್ ತಪ್ಪಿಸಿದ್ದಾರೆ ಎಂದು ಈ ಭಾಗದ ಟಿಕೆಟ್ ಆಕಾಂಕ್ಷಿಗಳಾಗಿದ್ದವರು ಹಾಗೂ ಎರಡನೇ ಸಾಲಿನ ಕಾರ್ಯಕರ್ತರು, ಲೀಡರ್‌ಗಳು, ಎಂ.ಪಿ., ಎಲ್.ಎಲ್.ಎ.ಗಳ ಬಳಿ ದೂರಿದ್ದಾರೆ ಎಂಬುದೂ ಸತ್ಯ.

7 ಜನ ಲಿಂಗಾಯಿತ ಆಕಾಂಕ್ಷಿಗಳಲ್ಲಿ ಹೋರಾಟಗಾರ ಡಾ. ಮಂಜುನಾಥ ಗೌಡ ನಿಧನರಾಗಿದ್ದಾರೆ. ಉಳಿದ 6 ಜನ ಒಟ್ಟಾಗಿ ಸೇರಿ ಡಾ. ಹಾಲನೂರ್ ಲೇಪಾಕ್ಷಿ ಅವರನ್ನು ಕಣಕ್ಕಿಳಿಸಿ ತೀವ್ರ ಹೋರಾಟ ನಡೆಸಿದ್ದಾರೆ.

ಹಿರಿಯೂರು ಶಾಸಕರಾದ ಪೂರ್ಣಿಮಾ ಅವರ ಪತಿ ಶ್ರೀನಿವಾಸ್ ಕೂಡಾ ಬಿಜೆಪಿ ಆಕಾಂಕ್ಷಿ ಆಗಿದ್ದರು. ಅವರೂ ಬಂಡಾಯವಾಗಿ ಸ್ಪರ್ಧಿಸಿ, ತೀವ್ರ ಪ್ರಚಾರ ನಡೆಸಿದ್ದಾರೆ. ಉಳಿದಂತೆ ಒಟ್ಟಾರೆ 15 ಸ್ಪರ್ಧಿಗಳಿದ್ದರೂ ಸೆಣಸಾಟ ಇರುವುದು ಚೌಡರೆಡ್ಡಿ, ಚಿದಾನಂದ ಗೌಡ, ಲೇಪಾಕ್ಷಿ, ಕಾಂಗ್ರೆಸ್‌ನ ರಮೇಶ್ ಬಾಬು ಹಾಗೂ ಶ್ರೀನಿವಾಸ್ ಮಧ್ಯೆ.

ಚೌಡರೆಡ್ಡಿ ಅವರು ತಮ್ಮ ಹಳೆಯ ಟೀಂ ಜೊತೆ ಪ್ರಚಾರ ನಡೆಸಿದ್ದಾರೆ. ಅವರ ಮತದ ಬುಟ್ಟಿಗೆ ಈ ಸಾರಿ ಇತರೆ ನಾಲ್ಕು ಸ್ಪರ್ಧಿಗಳು ಕೈಹಾಕಿದ್ದಾರೆ. ಇನ್ನು ಕಾಂಗ್ರೆಸ್‌ಗೆ ಸಾಂಪ್ರದಾಯಿಕ ಮತಗಳ ಜೊತೆಗೆ ಅಭ್ಯರ್ಥಿ ರಮೇಶ್ ಬಾಬು ಪ್ರಜ್ಞಾವಂತ ರಾಜಕಾರಣಿ ಅನ್ನೋ ಹೆಸರಿದೆ. ಆದರೆ, ಮತಪೆಟ್ಟಿಗೆಯಲ್ಲಿ ಅದು ಸಾಬೀತಾಗಬೇಕು.

ಬಿಜೆಪಿ ಅಭ್ಯರ್ಥಿಗೆ ಕಾರ್ಯಕರ್ತರ ಪಡೆಯೇ ಇದೆ. ಸಂಘ ಪರಿವಾರ ಇದೆ. ಅಂದರೂ ಕೂಡಾ ಎಷ್ಟು ಪ್ರಮಾಣದಲ್ಲಿ? ಎಂಬ ಜಿಜ್ಞಾಸೆ ಎದ್ದಿದೆ. ದಾವಣಗೆರೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಬಂಡಾಯ ಅಭ್ಯರ್ಥಿ ಲೇಪಾಕ್ಷಿ ಪರ ಬಿಜೆಪಿ ಕಾರ್ಯಕರ್ತರು ದುಡಿಯುತ್ತಿರುವುದು ಸುಳ್ಳೇನಲ್ಲ. ಅನೇಕ ಎರಡನೇ ಸಾಲಿನ ಬಿಜೆಪಿ ನಾಯಕರುಗಳು ಒಳಸುಳಿಯಲ್ಲಿ ಲೇಪಾಕ್ಷಿ ಅವರ ಪರ ಕೆಲಸ ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಹೀಗಾಗಿ ಲೇಪಾಕ್ಷಿ ಬಿಜೆಪಿ ಗೆ ದೊಡ್ಡ ಅಡ್ಡಗಾಲಾಗಿದ್ದಾರೆ. ನಾನು ಹುಟ್ಟು ಬಿಜೆಪಿ ಕಾರ್ಯಕರ್ತ ಎಂದು ಹೇಳುತ್ತಾರೆ. ಎರಡೆರಡು ಸಾರಿ ಭರವಸೆ ನೀಡಿ, ತನಗೆ ಟಿಕೆಟ್ ತಪ್ಪಿಸಿದ್ದಾರೆ ನಮ್ಮ ನಾಯಕರು. ಗೆಲುವು ನನ್ನದೇ ಅನ್ನುತ್ತಿದ್ದಾರೆ ಲೇಪಾಕ್ಷಿ. ಅಲ್ಲದೇ ಕೆಲವು ಮಠಾಧಿಪತಿಗಳದ್ದೂ ಲೇಪಾಕ್ಷಿ ಅವರಿಗೆ ಆಶೀರ್ವಾದ ಇದೆ ಎಂದು ಅವರ ಪರ ದುಡಿಯುತ್ತಿರುವ ಯುವಕರು ಹೇಳುತ್ತಾರೆ.

ಇನ್ನು ಶ್ರೀನಿವಾಸ್ ಅವರೂ ಭರ್ಜರಿ ಪ್ರಚಾರ ನಡೆಸಿದ್ದು, ಹಿಂದುಳಿದ ಮತಗಳಿಗೆ ಗಾಳ ಹಾಕಿದ್ದಾರೆ. ಅವರು ಕೂಡ ತಮ್ಮದೇ ಗೆಲುವಿನ ಭರವಸೆ ಇಟ್ಟುಕೊಂಡಿದ್ದಾರೆ.

ಈ ಐವರೂ ಮಾಧ್ಯಮಗಳ ಮುಂದೆ ತಾವೇ ಗೆಲ್ಲುವುದು ಎಂದು ಲೆಕ್ಕಾಚಾರ ಮಾಡಿ ಹೇಳುತ್ತಾರೆ. ಬಹುಶಃ ಈ ಚುನಾವಣೆಯಲ್ಲಿ ಎರಡು-ಮೂರನೇ ಪ್ರಾಶಸ್ತ್ಯದ ಮತಗಳ ಮೇಲೆ ಫಲಿತಾಂಶ ಹೊರ ಬೀಳುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಪ್ರತೀ ಅಭ್ಯರ್ಥಿಗಳು ಎರಡನೇ ಪ್ರಾಶಸ್ತ್ಯದ ಮತವನ್ನಾದರೂ ತಮಗೆ ನೀಡಿ ಎಂದು ದುಂಬಾಲು ಬಿದ್ದಿದ್ದಾರೆ.

ಕೊನೆ ಗಳಿಗೆಯಲ್ಲಿ ಗಿಫ್ಟ್, ಮದ್ಯ-ಮಾಂಸಗಳ ಪ್ರಭಾವ ಕೆಲಸ ತೋರಿಸುವ ಸಂಭವ ಇಲ್ಲದಿಲ್ಲ. ಇಂತಹ ಪ್ರಭಾವಗಳಿಗೆ ಒಳಗಾಗುವ ಪದವೀಧರರೂ ಕೆಲವರಿದ್ದಾರೆ ಅಂತಾರೆ ವಿವಿಧ ಪಕ್ಷಗಳ ಕಾರ್ಯಕರ್ತರುಗಳು.

- ವಿಹಾರಿ

## ಪೌರ ಕಾರ್ಮಿಕರಿಗೆ ಉಡುಗೊರೆ ನೀಡಿದ ಪಾಲಿಕೆ ಸದಸ್ಯ ಶಿವಪ್ರಕಾಶ್



ದಾವಣಗೆರೆ, ಅ.26- ಮಹಾ ನಗರ ಪಾಲಿಕೆ ಸದಸ್ಯರೂ ಆದ ಉದ್ಯಮಿ ಆರ್.ಎಲ್.ಶಿವಪ್ರಕಾಶ್ ಅವರು ತಮ್ಮ ವರ್ಕ್ ಶಾಪ್ ನಲ್ಲಿ ದಸರಾ ಹಬ್ಬದ ಸಂದರ್ಭದಲ್ಲಿ ಏರ್ಪಡಿಸಿದ್ದ ಆಯುಧ ಪೂಜೆ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಉಡುಗೊರೆ ನೀಡಿದರು. ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್. ಟಿ. ವೀರೇಶ್, ಪಾಲಿಕೆ ಸದಸ್ಯ ಎಲ್.ಡಿ. ಗೋಣಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಕೊಮಾರನಹಳ್ಳಿಯಲ್ಲಿ ಸಣ್ಣ ರಥೋತ್ಸವ

ಮಲೇಬೆನ್ನೂರು, ಅ.26- ಕೊಮಾರನಹಳ್ಳಿ ಗ್ರಾಮದಲ್ಲಿ ವಿಜಯದಶಮಿ ಹಬ್ಬದಂದು ಪ್ರತಿ ವರ್ಷ ಜರುಗುತ್ತಿದ್ದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಮಹಾರಥೋತ್ಸವವನ್ನು ಈ ಬಾರಿ ಕೋವಿಡ್ ಕಾರಣ ರದ್ದುಪಡಿಸಲಾಯಿತು. ವಾರದ ಮೊದಲು ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರು, ಕಡಿಮೆ ಜನ ಸೇರಿಕೊಂಡು ಸರಳವಾಗಿ ರಥೋತ್ಸವ ಆಚರಣೆಗೆ ಒಪ್ಪಿಗೆ ಕೊಟ್ಟಿದ್ದರು. ನಂತರ ಜಿಲ್ಲಾಧಿಕಾರಿಗಳ ಸೂಚನೆಯಂತೆ ರಥೋತ್ಸವ ರದ್ದು ಪಡಿಸಲಾಯಿತು. ಆದರೆ, ದೇವಸ್ಥಾನದ ಆವರಣದಲ್ಲೇ ಸೋಮವಾರ ಸಣ್ಣ ರಥೋತ್ಸವ ಆಚರಿಸಿ, ಸಂಪ್ರದಾಯವನ್ನು ಉಳಿಸಲಾಯಿತು. ದೇವಸ್ಥಾನದ ಅರ್ಚಕರು ಸೇರಿದಂತೆ 10-15 ಜನ ಮಾತ್ರ ಈ ವೇಳೆ ಹಾಜರಿದ್ದರು ಎನ್ನಲಾಗಿದೆ.

